dd-396
T.P-2

(1)

Reg B G No. 155 ಶ್ರೀ ದೀಪಾವಳಿ ಸಂಚಿಕೆ 22 - 10 - 1963

Bank Road Bhusar,
The Standard Shop
with a Standard Price
and a Standard Policy.
A Fair Price Shop
in Actual Practice.
You are quite safe in your
dealings with them
No Worry.
No higgle-haggling.

SATYAVADI, Daily MYSORE 4

ಸತ್ಯವಾದಿ

52 nd Year of Publication

ಸ್ಥಾಪಕರು : ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಸಕಲರಿಗೂ ದೀಪಾವಳಿ ಶುಭಾಶಯಗಳು Deepavali Greetings

ರಾಜ್ಯೋತ್ಸವ

ಬೆಂಗಳೂರು— ನವೆಂಬರು 1 ರಂದು ರಾಜ್ಯೋತ್ಸವ ದಿನ ಪ್ರಯುಕ್ತ ಸರ್ಕಾರಿ ರಜಾದಿನವಾಗಿ ಆಜ್ಞೆ ಮಾಡಲಾಗಿದೆ.

★

ಪಾಕಿಸ್ತಾನ ಧಾಳಿಕಾರರು

ಷಿಲಾಂಗ್— ಈ ವರ್ಷ ಜನವರಿ 1 ರಿಂದ ಆಗಸ್ಟ್ 31 ರವರೆಗೆ ಅಸ್ಸಾಂ ಪೋಲೀಸರು 3896 ಪಾಕ್ ಧಾಳಿಕಾರರನ್ನು ಹಿಡಿದಿರುವರು – ಈ ಪೈಕಿ ಅಸ್ಸಾಂ ಬಿಟ್ಟು ಹೋಗುವಂತೆ ನೋಟೀಸು ಕೊಡಲಾದ 1084 ಧಾಳಿಕಾರರು ಪೂರ್ವ ಪಾಕಿಸ್ತಾನಕ್ಕೆ ಹೊರಟುಹೋದರು.

★

ಮಾಜೋ ದೌರ್ಜನ್ಯರು

ಕಲ್ಕತ್ತಾ— ಸೆಪ್ಟಂಬರು 1 ರಿಂದ ಇಲ್ಲೀವರೆಗೆ 1250 ನ್ಯಾಯಬಾಹಿರ ಮಾಜೋ ರಾಷ್ಟ್ರೀಯರಂಗದ ಸದಸ್ಯರು ತಮ್ಮ ಶಸ್ತ್ರಾಸ್ತ್ರ ಮದ್ದುಗುಂಡು ಸಮೇತ ರಕ್ಷಣಾ ಪಡೆಗೆ ಶರಣಾಗತರಾಗಿದ್ದಾರೆ.

★

ನೇತಾಜಿ ವಿಷಯ

ಆಂಡಮಾನ್ ದ್ವೀಪದ ಆಜಾದ್ ಹಿಂದ್ ಆಳ್ವಿಕೆಯ ಅಧಿಕಾರಿಗಳು 1943 ನೇ ಅಕ್ಟೋಬರು 21 ರಂದು ಹಂಗಾಮಿ ಆಜಾದ್ ಹಿಂದ್ ಸರ್ಕಾರವನ್ನು ಘೋಷಿಸಿದರು – ನೇತಾಜಿ ಬೋಸರು ಈ ಇತಿಹಾಸ ಘೋಷಣೆಯನ್ನು 7 ರಾಷ್ಟ್ರಾಧಿಕಾರಿಗಳ ಪ್ರತಿನಿಧಿಗಳ ಎದುರಿನಲ್ಲಿ ಘೋಷಿಸಿದರು – 2 ತಿಂಗಳ ನಂತರ ನೇತಾಜಿ ಆಂಡಮಾನ್ ನಿಕೋಬಾರ್ ದ್ವೀಪಗಳಿಗೆ ಭೇಟಿಕೊಟ್ಟರು – ಬ್ರಿಟಿಸರು ರಂಗೂನನ್ನು ಪುನರಾಕ್ರಮಿಸಿದ ನಂತರ, ಜಪಾನ್ ಶರಣಾಗತವಾದನಂತರ, ಆಜಾದ್ ಹಿಂದ್ ಸರ್ಕಾರದ ಅಧಿಕಾರಿಗಳು ವಾಪಸ್ ಕರೆಸಲ್ಪಟ್ಟರು.

ಹಿಂದಿಗೆ ಅಗ್ರಸ್ಥಾನ

ನವದೆಹಲಿ— ಲಕ್ನೋ ವಿಶ್ವವಿದ್ಯಾಲಯವು 1971 ರಿಂದ ಬಿ ಎ ಮತ್ತು ಬಿ ಎಸ್ಸಿಗೆ ಹಿಂದಿ ಮಾತ್ರ ಮಾಧ್ಯಮವೆಂದು ಪ್ರಕಟಿಸಿದೆ.

★

ಗಾಂಧೀ ಇಂದು ಜೀವಂತವಾಗಿದ್ದಿದ್ದರೆ

ಲಂಡನ್ನಿನಲ್ಲಿ ಮಹಾತ್ಮಾ ಗಾಂಧಿಯವರ ಜನ್ಮಶತಾಬ್ದಿ ಉತ್ಸವದ ಉದ್ಘಾಟನಾ ಸಭೆಯೊಂದರಲ್ಲಿ ಮಾತನಾಡುತ್ತಾ ಮಾಜಿ ಭಾರತದ ಹೈ ಕಮಿಷನರ್ ಜಾರ್ಜ್ ಫ್ರೀಮನ್ನರು– ಗಾಂಧೀಜಿ ಇಂದು ಜೀವಂತವಾಗಿದ್ದಿದ್ದರೆ ಅವರು ಮೂಲೆಯ ಕೊಂಪೆಯ ಆಶ್ರಮಕ್ಕೆ ನಿವೃತ್ತರಾಗುತ್ತಿರಲಿಲ್ಲ; ಇಂದಿನ ಭಾರತದ ಹೋರಾಟಗಳ ಮಧ್ಯೆ ಇರುತ್ತಿದ್ದರು ಎಂದು ಹೇಳಿದರು.

●

ಪ್ರಧಾನಿಯವರಲ್ಲಿ ಮನವಿ

ನವದೆಹಲಿ— ಮೂರು ಮುಂದಿ ಮಾರ್ಕ್ಸಿಸ್ಟ್ ಕಮ್ಯೂನಿಸ್ಟ್ ನಾಯಕರು ಪ್ರಧಾನಿಯವರನ್ನು ಭೇಟಿ ಮಾಡಿ, ಸರ್ಕಾರವು ತಮ್ಮ ಸಹೋದ್ಯೋಗಿಗಳ ಮೇಲೆ ಮಾಡಿರುವ 'ಡಿಸ್‌ಮಿಸ್' ಮತ್ತು ಸಸ್ಪೆಂಡ್ ಆಜ್ಞೆಯನ್ನು ರದ್ದುಪಡಿಸಬೇಕೆಂದು ಕೋರಿದರು.

●

ಬೊಂಬು ರಫ್ತು

ಗೋಹತಿ—ಮೀನು ಹಿಡಿಯುವ ಕೋಲುಗಳನ್ನು ಮಾಡಿಕೊಳ್ಳಲು 1 ಮಿಲಿಯ ತೆಳುವಾದ ಬೊಂಬುಗಳನ್ನು ಅಸ್ಸಾಂನಿಂದ ಫ್ರಾನ್ಸಿಗೆ ರಫ್ತು ಮಾಡಲಾಗುತ್ತಿದೆ.

★

ನೇತ್ರದಾನಿ ಪದ್ಮಭೂಷಣ ಡಾ|| ಎಂ. ಸಿ ಮೋದಿಯವರು ಕೋಲಾರ ಚಿನ್ನದ ಗಣಿಯಲ್ಲಿ ಉಚಿತ ಕಣ್ಣಿನ ಆಪರೇಷನ್ ಕ್ಯಾಂಪನ್ನು ನವೆಂಬರು 1 ರಂದು ನಡೆಸುವರು.

ಜನತೆ ★
ಅಪೇಕ್ಷಿಸುವ
ಗುಣಗಳಾವುವು? ★

★○★○★○★○★○★○★
○ ● ದೀರ್ಘಕಾಲದ ಬಾಳಿಕೆ ○
★ ● ಉತ್ತಮ ಆರೋಗ್ಯ ★
○ ● ಅಧಿಕ ಸೌಕರ್ಯ ○
★○★○★○★○★○★○★

ಇವುಗಳನ್ನೊಳಗೊಂಡ
ಮೆತ್ತೆ ಮತ್ತು ಸುಪ್ಪತ್ತಿಗೆ
ಇವುಗಳಿಗಾಗಿ

ಫ್ಲೈಬರ್ ಫೋಂ ★

ಮೇಲೆ ಸಂಶಯವಿಲ್ಲದೆ ಅವಲಂಬಿಸಿ

ರಬ್ಬರ್‌ನಂತೆ ರೂಪಿಸಲ್ಪಟ್ಟ
ತೆಂಗಿನನಾರಿನ ಮೆತ್ತೆ

● ಗೃಹ ಮತ್ತು ● ಗೃಹೇತರ ಬಳಕೆಗೆ ಆಧುನಿಕ ಸಾಧನ

— ತಯಾರಕರು —

ಫ್ಲೈಬರ್ ಫೋಂ (ಪ್ರೈ) ಲಿ.,
ಪೋಸ್ಟ್ : ಬಲಿಯಾಪಟಂ (ಕೇರಳ)

ದೊರೆಯುವ ಸ್ಥಳ

ಕಾಯಿರ್ ಬೋರ್ಡ್ ಪೆವಿಲಿಯನ್
ಮತ್ತು ಸ್ಟಾಲ್ ನಂ. 1ರಿಂದ 4ರ
ವರೆಗಿನ ಗ್ರೌಂಡ್ ಬ್ಲಾಕಿನಲ್ಲಿ ಹಾಗೂ
ಸ್ಟಾಲ್ ನಂ. 6 ಮತ್ತು 7 D
ಬ್ಲಾಕ್ ದಸರಾ ವಸ್ತುಪ್ರದರ್ಶನ
ಮೈಸೂರು.

ಮೃತ್ಯು ಸಮುದ್ರ ನೀರಿನ ಮಟ್ಟ 1500 ವರ್ಷಗಳಲ್ಲಿ 40 ಮೀಟರ್ ಹೆಚ್ಚಿರುವುದಾಗಿ ನವ ದೆಹಲಿ ವಾರ್ತೆ.

ದೀಪಾವಳಿ ಸಂಭ್ರಮದ ಹಬ್ಬ

ದೀಪಾವಳಿ ಉತ್ಸವವನ್ನು ಜನರು ಆನಂದದಿಂದ ಆಚರಿಸುತ್ತಿದ್ದಾರೆ. ತುಂಬು ಶ್ರೀಮಂತರು ಹೆಚ್ಚು ಹರ್ಷದಿಂದ ಹಬ್ಬ ವಾಚರಿಸಿದರೆ, ಜನಸಾಮಾನ್ಯರು ಇದ್ದುದರಲ್ಲೇ ಹಬ್ಬವಾಚರಿಸಿ, ತೃಪ್ತಿಗೊಂಡು ಹರ್ಷಿಸುವರು. ಎಂದರೆ ಯುಗಾದಿಯಂತೆ ದೀಪಾವಳಿ ಸಹಾ ದೊಡ್ಡ ಹಬ್ಬ.

ದೀಪಾವಳಿ ಹಬ್ಬಕ್ಕೆ ಮೂಲ ಬಲಿ ಚಕ್ರವರ್ತಿ ಕಥೆ. ಮಹಾ ಭಾರತದ ಕರ್ಣನಂತೆ ಬಲಿ ಮಹಾದಾನಿ. ವಾಮನ ಬೇಡಿದ ದಾನವಿತ್ತು, ಪಾತಾಳಕ್ಕೆ ಹೋಗಿ ಕೀರ್ತಿ ಪಡೆದವ. ಈ ಮೂಲದಲ್ಲಿ ನಮ್ಮಲ್ಲಿ ಹಬ್ಬ ಆಚರಣೆ.

ದೀಪಾವಳಿ ಸಂದರ್ಭದಲ್ಲಿ ಲಕ್ಷ್ಮೀ ಪೂಜೆ ಸಹಾ ನಡೆಯುವುದು.

ವಾಮನ ಅವತಾರ ಆದಂದಿನಿಂದ ಹಬ್ಬ ಹುಟ್ಟಿರಬಹುದು. ಹಬ್ಬ ಆಚರಣೆ ಮುಖ್ಯ ಉದ್ದೇಶ ಕತ್ತಲೆಯಿಂದ ಬೆಳಕಿಗೆ ಬರುವುದು. ಅಜ್ಞಾನದಿಂದ ಜ್ಞಾನದತ್ತ ತಿರುಗುವುದು.

ಮನೆಗಳೆಲ್ಲೆಲ್ಲಾ ದೀಪೋತ್ಸವ ನಡೆಯುವ ಕಾಲ ಅದು. ಬಹಿರ್ಮುಖದಲ್ಲಿ ಎಣ್ಣೆ ದೀಪ ಉರಿದರೂ, ಅಂತರಂಗದಲ್ಲಿ ಜ್ಞಾನದೀವಿಗೆ ಉರಿಯಲಿ ಎಂಬ ಅರ್ಥವಿರಬೇಕು. ಹೇಗಾದರೂ ಇರಲಿ, ಇಂದು ಜ್ಞಾನದೀವಿಗೆ ಮನೆಮನೆಯಲ್ಲಿ ಉರಿದಷ್ಟೂ ಸಾಲದು; ಇಡೀ ಜಗತ್ತಿನಲ್ಲಿ ಉರಿಯಬೇಕು. ಹಿರಿಯರಿಂದ ಕಿರಿಯ ಮಕ್ಕಳ ಅಂತರಂಗದಲ್ಲಿ ಉರಿಯಬೇಕು.

ಜ್ಞಾನದೀವಿಗೆ ರಾಷ್ಟ್ರ ರಾಷ್ಟ್ರಗಳಲ್ಲಿ ಉರಿದಷ್ಟೂ ರಾಷ್ಟ್ರ ರಾಷ್ಟ್ರಗಳಲ್ಲಿ ಪರಸ್ಪರ ಅರಿವುವುಂಟಾಗುವುದು. ಆಗ ವಿಶ್ವಶಾಂತಿ ಉಂಟಿಸಲು ಸಹಕಾರಿಯಾಗುತ್ತದೆ. ವಿಶ್ವದೃಷ್ಟಿಯಿಂದ ರಾಷ್ಟ್ರ ರಾಷ್ಟ್ರಗಳಲ್ಲಿ ಜ್ಞಾನದೀವಿಗೆ ಉರಿಯಲೆಂದು ಆಶಿಸಬೇಕು.

ದೀಪಾವಳಿಯಲ್ಲಿ ಸಿಹಿ ತಿನ್ನುವಂತೆ, ಬಾಯಿ ರುಚಿ ತಣಿಸುವಂತೆ, ಭಾರತದ ನಾನಾ ಭಾಷೆ ರಾಜ್ಯಗಳಲ್ಲಿ ಒಂದು ಹೊಂದಾಣಿಕೆ ಬಂದು, ರಾಷ್ಟ್ರದ ಐಕ್ಯತೆ ಭದ್ರವಾಗಲಿ. ನಮ್ಮ ರಾಜ್ಯ, ಮೈಸೂರು ರಾಜ್ಯದ ಮುನ್ನಡೆ ಮುಖ್ಯಮಂತ್ರಿ ಶ್ರೀ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಯಶಸ್ವಿಯಾಗಿ ಜರಗಲಿ.

ವಿಶ್ವದಲ್ಲೆಲ್ಲಾ ಜ್ಞಾನ ಜ್ಯೋತಿ ಬೆಳಗಿ ಜನ ಸೌಮ್ಯದಿ ಆಗಿರಬೇಕೆಂದು ಎಲ್ಲರೂ ಆಶಿಸಿ ಈ ವರ್ಷದ ದೀಪಾವಳಿಯನ್ನು ಆಚರಿಸೋಣ.

ಬ್ರಿಟನ್ನಿಗೆ ಪ್ರವಾಸಿಗರು

ಕಳೆದ ವರ್ಷ ಬ್ರಿಟನ್ನಿಗೆ 23 ಕೋಟಿ 60 ಲಕ್ಷ ಪೌಂಡುಗಳನ್ನು ಖರ್ಚುಮಾಡಿ ಕೊಂಡು ಮೂವತ್ತೈದು ಲಕ್ಷ ಪ್ರವಾಸಿಗರು ಭೇಟಮಾಡಿದರೆಂದು ಪ್ರಕಟವಾಗಿದೆ.

●

ಅತಿ ವೃದ್ಧನ ಸಾವು

ಪೂರ್ವ ಕೆನಿಯಾದ ಓನಿಯಾಗೋನೆಂಬಾತ ತನ್ನ 140 ನೇ ವಯಸ್ಸಿನಲ್ಲಿ 6 ಪತ್ನಿಯರನ್ನೂ, 20 ಗಂಡು ಮಕ್ಕಳನ್ನೂ, 200 ಮೊಮ್ಮಕ್ಕಳನ್ನೂ ಬಿಟ್ಟು ಸತ್ತನು.

○

ಜನಸಂಖ್ಯೆ ಏರಿಕೆ

ವಿಶ್ವ ಜನಸಂಖ್ಯೆ ದಿನಕ್ಕೆ ಒಂದ ಲಕ್ಷ 80 ಸಾವಿರದಂತೆ ಅಂದರೆ ವರ್ಷಕ್ಕೆ ಆರೂವರೆ ಕೋಟಿ ಹೆಚ್ಚುತ್ತಿರುವುದಾಗಿ ವಿಶ್ವಸಂಸ್ಥೆ ಜನಸಂಖ್ಯೆ ವಾರ್ಷಿಕ ವರದಿ ಪ್ರಕಟಿಸಿದೆ.

★

ಜನಸಂಘದ ಸ್ಪರ್ಧೆ

ಉತ್ತರ ಪ್ರದೇಶ ಮತ್ತು ಬಿಹಾರಿನಲ್ಲಿ ಜನಸಂಘವು ಎಲ್ಲಾ ಸ್ಥಾನಗಳನ್ನು, ಪಶ್ಚಿಮ ಬಂಗಾಳದಲ್ಲಿ 280 ರಲ್ಲಿ ನೂರೈವತ್ತು ಸ್ಥಾನಗಳನ್ನು, ಪಂಜಾಬಿನ 104 ಸ್ಥಾನಗಳಲ್ಲಿ 45ನ್ನು ಮಧ್ಯಾವರ್ತಿ ಚುನಾವಣೆಯಲ್ಲಿ ಜನಸಂಘ ಸ್ಪರ್ಧಿಸಲಿದೆ.

●

ಕಾರ್ಯನಿರತ ಪತ್ರಿಕೋದ್ಯೋಗಿಗಳಿಗೆ ರಿಯಾಯಿತಿಗಳು

ಸಿಟಿ ಬಸ್ ಸರ್ವಿಸ್ಸುಗಳಲ್ಲಿ ಪ್ರಯಾಣ ಮಾಡಲು ಕಾರ್ಯನಿರತ ಪತ್ರಿಕೋದ್ಯೋಗಿಗಳಿಗೆ ತಿಂಗಳಿಗೆ 6 ರೂಪಾಯಿ ದರದಲ್ಲಿ ತಿಂಗಳ ಪಾಸುಗಳನ್ನು ಒದಗಿಸಲಾಗುತ್ತಿದೆ.

●

ಉಪಾಧ್ಯಾಯರಿಗೆ ನೆರವು

ಇದುವರೆಗೆ ಮೈಸೂರು ರಾಜ್ಯದಲ್ಲಿ 261 ಉಪಾಧ್ಯಾಯರು ಮತ್ತು ಅವರ ಶಿಕ್ಷಕರ ರಾಷ್ಟ್ರೀಯ ನಿಧಿಯಿಂದ ರೂ. 155970 ಸಹಾಯಧನವಾಗಿ ನೀಡಲಾಗಿದೆ.

★



ಸೊಗಸಾಗಿ ಬೆಳೆದ ಬಾಳೇಗಿಡ

ಅರಮನೆಗೆ ಆನೆಗಳು

ಶ್ರೀಮನ್ಮಹಾರವರು ಶೃಂಗೇರಿಗೆ ಹೋಗುವ ಮಾರ್ಗದಲ್ಲಿ ಸಕ್ರೆಬೈಲು ಆನೆಬಿಡಾರದಲ್ಲಿನ್ನ ನಂಜುಂಡ, ಭೀಮ, ಭಾಸ್ಕರ ಎಂಬ ಆನೆಗಳನ್ನು ಅರಮನೆಗಾಗಿ ಚುನಾಯಿಸಿದ್ದಾರೆಂದು ಗೊತ್ತಾಗಿದೆ.

ಆಶೋಕ ಏಜೆನ್ಸೀಸ್

ಲಾನ್ಸ್‌ಡೌನ್ ಬಿಲ್ಡಿಂಗ್ಸ್, ಬೆಂಗಳೂರು

ಎಲ್ಲ ವಿಧ ಸಹಕಾರಿ ಪತ್ರಿಕೆಗಳಿಗೂ ಜಾಹೀರಾತುಗಳನ್ನು ಪಡೆಯುವ ಕೇಂದ್ರ

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಬೇಗನ್ನೇ ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಗಳು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ. ಸಿ ಮೋದಿಯವರು ಡಾ ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೋ) ಶಾಸ್ತ್ರಧರ್ಮನಿರತ ಶ್ರೀ ಅನಂತನರಸಿಂಹಯ್ಯಂಗಾರ್ (ಹೊಂಗೆನೂರು) ರವರೂ ಶುಭಾಶಯದೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತಿಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಜ್ಞಾಪನೆಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವನೆಂದು ಆಶಿಸಿ, ಕೃತಜ್ಞತಾಪೂರ್ವಕವಂದಿಸುತ್ತೇವೆ

ಸಂಪಾದಕ ‘ಸತ್ಯವಾದಿ’
ರಾಮರಾಜಪುರಂ, ಮೈಸೂರು 4.

ಮು-397
T.P-2

ಹಿಂದೂಗಳ ಆಚಾರ

ಗ್ರಾಹಕರು – ಶಾಸ್ತ್ರಧರ್ಮನಿರತ " ಅನಂತನರಸಿಂಹಯ್ಯಂಗಾರ್

(ಮುಂದುವರಿದುದು)

ಇನ್ನು ಇತರ ಮತಗಳಂತೆ ಒಬ್ಬನೇ ಗುರು ಇಲ್ಲದೇ ಅನೇಕರು ಇರುವುದೇಕೆ ? ಎಂಬುದನ್ನು ನೋಡೋಣ. ಹಿಂದುಗಳಿಗೂ ವೇದವ್ಯಾಸರೇ ಗುರುಗಳು. ಅದರಿಂದಲೇ ವ್ಯಾಸಪೂರ್ಣಿಮಿಗೆ ಗುರುಪೂರ್ಣಿಮಾ ಎಂಬ ಹೆಸರು ಬಂದಿದೆ. ಅವರು ರಚಿಸಿರುವ ಬ್ರಹ್ಮಸೂತ್ರಕ್ಕೆ ಎಲ್ಲಾ ಆಚಾರ್ಯರೂ ಭಾಷ್ಯವನ್ನು ಬರೆದಿರುತ್ತಾರೆ. ಹಿಂದೂಧರ್ಮದಲ್ಲಿ ಮೋಕ್ಷಕ್ಕೆ ನಾಲು ಹಾದಿಯನ್ನು ತೋರಿಸಿದ್ದಾರೆ. ಕರ್ಮ, ಜ್ಞಾನ, ಧ್ಯಾನ, ಭಕ್ತಿ ಎಂಬ ನಾಲ್ಕು ವಿಧಿಗಳು ; ಅವುಗಳಲ್ಲಿ ಮುಖ್ಯವಾದದ್ದು ಯಾವುದು ಎಂಬುದರಲ್ಲಿ ಒಂದು ಮತಕ್ಕೂ ಇನ್ನೊಂದು ಮತಕ್ಕೂ ಭಿನ್ನಾಭಿಪ್ರಾಯವಾಗಿದೆ. ಆದರೆ ಎಲ್ಲಾ ಆಚಾರ್ಯರೂ ಈ ನಾಲ್ಕು ಕ್ರಮಗಳನ್ನೂ ಒಪ್ಪಿದ್ದಾರೆ.

ಕರ್ಮಯೋಗ, ಭಕ್ತಿಯೋಗದಿಂದ ಪಡೆದ ಜ್ಞಾನಯೋಗದಿಂದಲೇ ಮುಕ್ತಿಯೆಂದು ಶಂಕರಾಚಾರ್ಯರು ಹೇಳಿದ್ದಾರೆ ; ಕರ್ಮಯೋಗ, ಜ್ಞಾನಯೋಗದಿಂದ ಪಡೆದ ಭಕ್ತಿಯೋಗವೇ ಮುಕ್ತಿಮಾರ್ಗವೆಂದೂ ಮಧ್ವಾಚಾರ್ಯರು ಹೇಳಿದ್ದಾರೆ ; ಜ್ಞಾನಯೋಗ ಭಕ್ತಿಯೋಗದಿಂದ ಕೂಡಿದ ನಿಷ್ಕಾಮ ಕರ್ಮಯೋಗವೇ ಮುಕ್ತಿ ಸಾಧನವೆಂದು ರಾಮಾನುಜಾಚಾರ್ಯರು ತಿಳಿಸಿದ್ದಾರೆ. ಇಷ್ಟೇಹೊರತು ಎಲ್ಲಾ ಆಚಾರ್ಯರೂ ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಗೀತೆಯ ಆಧಾರದಿಂದಲೇ ತಮ್ಮ ಮತಗಳನ್ನು ಸ್ಥಾಪಿಸಿದ್ದಾರೆ.

ಭಾವಿಯ ಸಮೀಪದಲ್ಲಿರುವವನು ನೀರನ್ನು ಹೊಂದಬಹುದೇ ಹೊರತು ಮತ್ತೇನನ್ನೂ ಪಡೆಯಲು ಸಾಧ್ಯವಾಗಲಾರದು. ಆದರೆ ಸಮುದ್ರದ ಸಮೀಪದಲ್ಲಿರುವವನು ತನ್ನ ಶಕ್ತ್ಯಾನುಸಾರ ಮುತ್ತು, ಹವಳ, ಶಂಖ, ಕಪ್ಪೆಚಿಪ್ಪು, ನೀರು, ಇವುಗಳಿಲ್ಲವನ್ನೂ ಪಡೆಯಬಹುದು. ಇತರ ಮತಗಳವರು ಹಿಂದೂಧರ್ಮವನ್ನು ಹಾಸ್ಯ ಮಾಡುವುದೆಂದರೆ, ಭಾವಿಯ ಸಮೀಪದಲ್ಲಿರುವವನು ಸಮುದ್ರ ಸಮೀಪದಲ್ಲಿರುವವನನ್ನು ಹಾಸ್ಯಮಾಡಿದಂತೆಯೇ ಸರಿ.

ಆಚಾರದ ವಿಚಾರದಲ್ಲಿ ಮತಾಚಾರ್ಯರಲ್ಲಿ ಭಿನ್ನಾಭಿಪ್ರಾಯವೇನೂ ಇಲ್ಲ. ಎಲ್ಲಾ ಮತದವರೂ ಜಪಿಸುವುದು ಒಂದೇ ಗಾಯಿತ್ರಿ ಮಂತ್ರವನ್ನು ; ಒಂದೇ ವೇದ ಮಂತ್ರದಿಂದಲೇ ಎಲ್ಲರ ಷೋಡಶ ಕರ್ಮಗಳೂ ನಡೆಯಬೇಕು.

ಇನ್ನು ಹಿಂದುಗಳಲ್ಲಿ ಅನೇಕ ದೇವತೆಗಳು ಇರುವುದೇಕೆ ? ಎಂಬುದನ್ನು ನೋಡೋಣ. ಈಸಾಯಿಗಳೂ ಮೂವತ್ತು ಕೋಟಿ ದೇವತೆಗಳನ್ನು ಹೇಳುತ್ತಾರೆ. ಅವರಲ್ಲಿ ನಾಲ್ಕು ಜನರ ಹೆಸರುಗಳನ್ನು ಮಾತ್ರಾ ಹೇಳುತ್ತಾರೆ. ಅವರುಗಳಿಗೆ " ಏಂಜಲ್ಸ್ " ಎಂದು ಕರೆಯುತ್ತಾರೆ. ಕೋಟ್ಯಾಂತರ ದೇವತೆಗಳಿದ್ದರೂ ಎಲ್ಲರನ್ನೂ ಆಳುವ ಸರ್ವೇಶ್ವರನು ಒಬ್ಬನೇ ಎಂದು ಎಲ್ಲಾ ಹಿಂದೂಗಳೂ ತಿಳಿದಿದ್ದಾರೆ. ಇತರ ದೇಶಗಳಲ್ಲಿ ಪರಮಾತ್ಮನ ಅವತಾರವಾಗಿರುವದಿಲ್ಲ, ಆದರೆ ಭಾರತ ದೇಶದಲ್ಲಿ ಪೂರ್ಣಾನುಗ್ರಹವನ್ನು ಮಾಡಿರುವ ಪರಮಾತ್ಮನು ಅನೇಕಾವರ್ತಿ ಅನೇಕ ರೂಪಗಳಿಂದ ಅವತಾರ ಮಾಡಿದ್ದಾನೆ. ಆಯಾ ರೂಪುಗಳ ಅರ್ಚಾಮೂರ್ತಿಗಳನ್ನು ಎಲ್ಲಾ ಕಡೆಯೂ ಪೂಜಿಸುತ್ತಾರೆ. ಆದರೆ ಎಲ್ಲಾ ಮೂರ್ತಿಗಳೂ ಒಬ್ಬ ಪರಮಾತ್ಮನ ಅನೇಕ ರೂಪಗಳೆಂದು ಹಿಂದುಗಳು ತಿಳಿದಿದ್ದಾರೆ.

ಶರೀರಕ್ಕೂ ಜೀವಾತ್ಮನಿಗೂ ಇರುವ ಸಂಬಂಧ, ಇವುಗಳನ್ನು ಸನಾತನಧರ್ಮ ವಿವರಿಸುನಮಟ್ಟಿಗೆ ಇನ್ನ್ಯಾವ ಮತದಲ್ಲಿಯೂ ತಿಳಿಸಿರುವುದಿಲ್ಲ. ಅರಿಯದ ಅಜ್ಞಾನಿಗಳು ಹಿಂದೂಧರ್ಮವನ್ನು ಹಾಸ್ಯಮಾಡಿದರೆ ಅದರಿಂದ ಹಿಂದೂಗಳಿಗೇನೂ ಬಾಧಕ ಬರಲಾರದು : ಆದರೆ ಹಾಗೆ ಮಾಡುವವರ ಅಜ್ಞಾನವಷ್ಟೇ ಪ್ರದರ್ಶಿತವಾಗುತ್ತದೆ.

Cow Slaughter should be banned Immediately

★

Help The Gorakshana

ವುಡ್‌ಲಾಂಡ್ಸ್ ಜನಪ್ರಿಯ 6 ನೇ ವಾರ
ವೈಭವ ಆರಂಭ

ಮನಮೋಹಕ ಹಿಂದಿ ಚಿತ್ರ — — ಈಸ್ಟ್‌ಮನ್ ಕಲರ್

ನೀಲ್ ಕಮಲ್ ★ Neel Kamal

.... ಮಿಲಿಯಗಟ್ಲಿ ತೂಪಾಯಿನ ಆತ್ಯಾಕರ್ಷಣೀಯ ಹಿಂದಿ ಚಿತ್ರ ....

ತಾರಾಗಣ— ವಹಿದಾ ರಹಿಮಾ, ಮನೂಜ್‌ಕುಮಾರ್, ರಾಜ್‌ಕುಮಾರ್ ಬಾಲ್‌ರಾಜ್ ಸಹಾನಿ, ಲಲಿತಾ ಪವಾರ್, ಡೇವಿಡ್, ಶಶಿಕಲಾ, ಮಹಮೂದ್

ಆಪೆರ— ಜನಪ್ರೀತ 2 ನೇ ವಾರ

ಮನಮೋಹಕ ತಮಿಳು ಚಿತ್ರ — — ದಿನವಹಿ ೩ ಆಟಗಳು.

ನೇರ್ ವಳಿ

ನಟವರ್ಗ– ಜಯಶಂಕರ್, ಆನಂದ್, ಮನೋಹರ್, ನಾಗೇಶ್, ಸುಂದರರಾಜ್ ವಾಣಿಶ್ರೀ, ಚಂದ್ರಿಕಾ, ಮನೋರಮ, ವಿಜಯಲಲಿತ

Printing — Neat Binding

Lakshminarasimha Press

Sivarampet, Mysore

SHAKTI

SUDHA

A Superb Tonic.

Protect the Cow



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ನಿಮ್ಮ ನೆಚ್ಚಿನ
ಮೈಸೂರು ಗಂಧದ ಸಾಬೂನು
ಈಗ ಹೊಸ ರೂಪದಲ್ಲಿ ಬಂದಿದೆ

ಅತ್ಯಾಧುನಿಕ ಸ್ವಯಂಚಾಲಿತ
ವ್ಯಾಕುಮ್ ಸೋಪ್ ಪ್ಲಾಂಟ್ ಈ ಸಾಬೂನಿಗೆ ಮೊದಲಿನ
ಗೋಲಾಕಾರದ ಬದಲು ಚೌಕಾಕಾರವನ್ನು ನೀಡಿದೆ
ಆಕಾರದಲ್ಲಿಯ ಬದಲಾವಣೆಯಿಂದ ಆಳತೆ ಕುಗ್ಗಿಲ್ಲ ಮತ್ತು
ಸುವಾಸನೆ ಬದಲಾಗಿಲ್ಲ

★

ಮೈಸೂರು ಸರ್ಕಾರದ ಸಾಬೂನು ಕಾರ್ಖಾನೆ, ಬೆಂಗಳೂರು.

Golden Jubilee of 'Satyavadi'

The golden jubilee of the 'Satyavadi' is to be celebrated very soon

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, Sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) Sri Ananthanarasimha Iyengar (Honganur) have generously extended donations and best wishes.

It is welknown that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysoe 4

ದೀಪಾವಳಿ ಶುಭಾಶಯಗಳು

ಪತ್ರಿಕೆಯವರಿಗೂ ಹಾಗೂ ಮೈಸೂರಿನ ಜನತೆಗೂ ನನ್ನ ಶುಭಾಶಯಗಳು. ಚಾಮುಂಡಾಬಿಕೆ ಶುಭವನ್ನುಂಟು ಮಾಡಲಿ – ಎಂದು ಈ ದಿನ ಬೆಳಿಗ್ಗೆ ಕರೆದಿದ್ದ ಪತ್ರಿಕಾ ಸಮ್ಮೇಳನದಲ್ಲಿ ಮೈಸೂರು ಪುರಸಭೆಯ ಅಧ್ಯಕ್ಷ ಶ್ರೀ ಬಿ. ಸಿ. ಲಿಂಗಯ್ಯನವರು ತಿಳಿಸಿದರು.

ಚುನಾವಣೆ ಸ್ಟಂಟ್

ಪೌರಸಭೆ ವಿರೋಧ ಪಕ್ಷದ ನಾಯಕ ಶ್ರೀ ಎಂ. ಎ ತಿಮ್ಮಯ್ಯನವರು ಪತ್ರಿಕಾ ಸಮ್ಮೇಳನದಲ್ಲಿ ಇತ್ತ ಹೇಳಿಕೆ ಸತ್ಯಕ್ಕೆ ದೂರವಾದುದು ಎಂದು ತಿಳಿಸಿದ ಪುರಸಭೆ ಅಧ್ಯಕ್ಷರು, ವಿರೋಧ ಪಕ್ಷದ ನಾಯಕರ ಹೇಳಿಕೆ ಚುನಾವಣೆ ಸ್ಟಂಟ್ ಎಂದು ನುಡಿದರು.

ಮೈಸೂರು ಪುರಸಭೆಯ ಶತಮಾನೋತ್ಸವ ಆಚರಣೆ ಈ ವರ್ಷ ನವೆಂಬರ್ ಮೂರನೆಯ ವಾರದಲ್ಲಿ ನಡೆಯುವುದಾಗಿ ಪುರಸಭಾಧ್ಯಕ್ಷರು ತಿಳಿಸಿ, 9-9-68 ರವರಿಗೆ ಪುರಸಭೆಯ ಶತಮಾನೋತ್ಸವ ಸಮಿತಿಯಲ್ಲಿ ವಿರೋಧ ಪಕ್ಷದ ಸದಸ್ಯರು ಸಹಕರಿಸಿಕೊಂಡುಬಂದರೆಂದು ಹೇಳಿದರು.

ಪುರಸಭೆಯನ್ನು ಮುಂದುವರಿಸಿದಾಗ ಅಲ್ಪಾವಧಿಯಲ್ಲಿ ಇರುವಂತೆ ನಡೆಸಿಕೊಂಡು ಹೋಗಬೇಕೆಂಬ ತೀರ್ಮಾನಕ್ಕೆ ಬಂದಾಗ, ತಾವು ಹೇಳಿದ ಸದಸ್ಯರು ಉಪ ಸಮಿತಿಯಲ್ಲಿರಬೇಕೆಂದು ವಿರೋಧ ಪಕ್ಷದವರು ಒತ್ತಾಯ ಮಾಡಿದರು. ಆದು ಸಾಧ್ಯವಾಗಲಿಲ್ಲ. ಶತಮಾನೋತ್ಸವ ಸಮಿತಿಗೆ ಅಸಹಕಾರ ತೋರಿದರು – ಎಂದು ಪುರಸಭೆ ಅಧ್ಯಕ್ಷರು ತಿಳಿಸಿದರು.

ಶತಮಾನೋತ್ಸವ ಯಶಸ್ಸಿಗೆ ಸಹಕರಿಸುವಂತೆ ವಿರೋಧ ಪಕ್ಷದವರನ್ನು ಮತ್ತೆ ಪ್ರಾರ್ಥಿಸುವುದಾಗಿ ಅಧ್ಯಕ್ಷರು ತಿಳಿಸಿದರು.